**ಹೊಳೆನರಸೀಪುರ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ**

**ಸಿ.ಸಿ. ನಂ.642/2018.**

ಪಿರ್ಯಾದುದಾರರು : ಸರ್ಕಾರದ ಪರವಾಗಿ- ಹೊಳೆನರಸೀಪುರ ನಗರ ಪೋಲಿಸರು

**ವಿರುದ್ಧ**

ಆಪಾದಿತರು :

1. ಮಂಜೇಗೌಡ ಬಿನ್ ತಿಮ್ಮೇಗೌಡ, 36 ವರ್ಷ,
2. ಕೃಷ್ಣೇಗೌಡ ಬಿನ್ ಜವರೇಗೌಡ, 62 ವರ್ಷ,
3. ರಾಜೇಗೌಡ ಉ: ಬೋರಪ್ಪ ಬಿನ್ ತಿಮ್ಮೇಗೌಡ, 67 ವರ್ಷ,
4. ದೊಡ್ಡಮ್ಮ ಕೋಂ ನಿಂಗೇಗೌಡ, 75 ವರ್ಷ,
5. ಗಂಗಮ್ಮ ಕೋಂ ರಂಗೇಗೌಡ, 75 ವರ್ಷ,
6. ತಾಯಮ್ಮ ಕೋಂ ರಂಗೇಗೌಡ, 60 ವರ್ಷ,
7. ತಂಗ್ಯಮ್ಮ ಕೋಂ ಗಂಗಾಧರ, 58 ವರ್ಷ,
8. ಗಾಯಿತ್ರಿ ಕೋಂ ಜವರೇಗೌಡ, 40 ವರ್ಷ,
9. ಡೈರಿ ಪ್ರೇಮ ಕೋಂ ಮಂಜೇಗೌಡ, 45 ವರ್ಷ,

ಎಲ್ಲರೂ ಸಿಗರನಹಳ್ಳಿ ಗ್ರಾಮ,
ಹೊಳೆನರಸೀಪುರ ತಾಲ್ಲೂಕಿನ ವಾಸಿಗಳು.

**:- ದೋಷಾರೋಪಣೆ :-**

ಶ್ರೀ ಆರ್ ಮಹೇಶ ಬಿ.ಎ.ಎಲ್., ಎಲ್ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಹೊಳೆನರಸೀಪುರ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಹೊಳೆನರಸೀಪುರ ಗ್ರಾಮಾಂತರ ಠಾಣಾ ವ್ಯಾಪ್ತಿಗೆ ಸೇರಿದ ಸಿಗರನಹಳ್ಳಿ ಗ್ರಾಮದಲ್ಲಿ ದಿನಾಂಕ 01.04.2016 ರಂದು ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದ ಪೂಜೆಯ ವಿವಾದ ಇದ್ದುದರಿಂದ ಚಾಸಾ 1 ಮತ್ತು 3ರವರು ಗ್ರಾಮಕ್ಕೆ ಭೇಟಿ ನೀಡಿದಾಗ ಮೇಲ್ಕಂಡ ಆರೋಪಿಗಳಾದ ನೀವು ಸರ್ಕಾರಿ ಪ್ರಾಥಮಿಕ ಶಾಲೆಯ ಮುಂಭಾಗ ಸಮಾನ ಉದ್ದೇಶದಿಂದ ಕೂಡಿಕೊಂಡು ಅಕ್ರಮ ಗುಂಪು ಕಟ್ಟಿಕೊಳ್ಳುವುದರ ಮೂಲಕ ಭಾ.ದಂ.ಸಂ.ಕಲಂ **143** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಉಂಟುಮಾಡಿ ಸಾರ್ವಜನಿಕ ಶಾಂತಿಗೆ ಭಂಗ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ **147** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಮಾನವನ ಪ್ರಾಣಕ್ಕೆ ಹಾನಿಯುಂಟಾಗುವ ಆಯುಧವಾದ ಮಾರಕಾಸ್ತ್ರವಾದ ಕಲ್ಲುಗಳನ್ನು ಹಿಡಿದುಕೊಂಡು ಬಂದು ದೊಂಬಿ ಉಂಟುಮಾಡುವುದರ ಮೂಲಕ ಭಾ.ದಂ.ಸಂ.ಕಲಂ **148** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಚಾಸಾ 1ರವರ ಹತ್ತಿರ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ನಿಂದಿಸಿ ಸ್ಥಳದಲ್ಲಿ ಅಶಾಂತಿಯನ್ನು ಉಂಟುಮಾಡಲು ಪ್ರೇರೆಪಿಸುವುದರ ಮೂಲಕ ಭಾ.ದಂ.ಸಂ.ಕಲಂ 504 ಸಹಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ವಿಚಾರದಲ್ಲಿ ಅಕ್ರಮ ಗುಂಪು ಕಟ್ಟಿಕೊಂಡು, ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ 1 ಮತ್ತು 3ರವರೊಂದಿಗೆ ಹಲ್ಲೆ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ **332** ಸಹಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಆರನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ 1 ಮತ್ತು 3ರವರ ಮೇಲೆ ಕಲ್ಲುಗಳಿಂದ, ಕೈಯಿಂದ ಹಲ್ಲೆ ಮಾಡಿ ಅವರ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸುವುದರ ಮೂಲಕ ಭಾ.ದಂ.ಸಂ.ಕಲಂ **353** ಸಹಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಏಳನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಕೊಲೆ ಬೆದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ 506 ಸಹಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎಂಟನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, 2ನೇ ಆರೋಪಿಯು ಚಾಸಾ 2ರವರ ಕೈಯಲ್ಲಿದ್ದ ಆ್ಯಪಲ್ ಐ ಪ್ಯಾಡನ್ನು ಕಿತ್ತು ನೆಲಕ್ಕೆ ಹಾಕಿ ಸುಮಾರು 25,000/- ರೂ ನಷ್ಟ ಉಂಟುಮಾಡುವುದರ ಭಾ.ದಂ.ಸಂ.ಕಲಂ 427 ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, 2ನೇ ಆರೋಪಿಯು ಚಾಸಾ 2ರವರ ಕೈಯಲ್ಲಿದ್ದ ಆ್ಯಪಲ್ ಐ ಪ್ಯಾಡನ್ನು ಕಿತ್ತು ನೆಲಕ್ಕೆ ಹಾಕಿ, ಅದರಲ್ಲಿ ಕಲೆ ಹಾಕಿದ್ದ ಸಾಕ್ಷ್ಯಾದಾರಗಳನ್ನು ನಾಶಪಡಿಸುವುದರ ಭಾ.ದಂ.ಸಂ.ಕಲಂ 201 ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲ್ಕಂಡಂತೆ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಿರುತ್ತೇನೆ.

ತಾ : 26/12/2019.
ಸ್ಥಳ : ಹೊಳೆನರಸೀಪುರ.

ಜೆಎಂಎಫ್‌ಸಿ, ಹೊಳೆನರಸೀಪುರ.